ಮೂಲ ದಾವಾ ಸಂಖ್ಯೆ. 48/2016 ಡಿ ಡಬ್ಲ್ಯೂ 2

(ದಿನಾಂಕ 14-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲುಃ ವಾದಿ ಪರ ಶ್ರೀ ಬಿ ಎಂ ಎ ವಕೀಲರಿಂದಃ-

ನಾನು 3 ನೇ ತರಗತಿವರೆಗೆ ವ್ಯಾಸಾಂಗ ಮಾಡಿದ್ದೇನೆ. ಈ ದಾವೆಯನ್ನು ಮರಿಯಮ್ಮ ಇವರ ಮೇಲೆ ಹುಲಿಗೆಮ್ಮ ಇವರು ದಾಖಲಿಸಿದ್ದಾರೆ. ದಾವಾ ಆಸ್ತಿಯು ಸರಕಾರದವರು ನನಗೆ ಕೊಟ್ಟಿದ್ದಾರೆ ಅದು ನನ್ನ ಜಾಗ ಅಂತಾ ಈ ದಾವೆಯನ್ನು ಸಲ್ಲಿಸಿದ್ದಾಳೆ. ದಾವಾ ಆಸ್ತಿಯ ಖಾತಾ ನಂ 01 ಇರುತ್ತದೆ. ಸದರಿ ಆಸ್ತಿಯ ಚೆಕ್ ಬಂದಿ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ಅನ್ನಪೂರ್ಣಮಂ ಇವರ ಮನೆ, ಉತ್ತರಕ್ಕೆ ಅಂದಾನಪ್ಪ ಇವರ ಜಾಗ, ದಕ್ಷಿಣಕ್ಕೆ ಚರಂಡಿ ಇರುತ್ತದೆ. ಸದರಿ ಚರಂಡಿ ದಾಟಿದ ನಂತರ ಪ್ರತಿವಾದಿಯ ಮನೆ ಬರುತ್ತದೆ ಎಂದರೆ ಸಾಕ್ಷಿಯು ನಿಂಗಮ್ಮ ಇವರ ಮನೆ ಬರುತ್ತದೆ ಎನ್ನುತ್ತಾರೆ. ಹುಲಿಗೆಮ್ಮ ಇವರು ಏನು ದಾಖಲೆ ಹಾಜರುಪಡಿಸಿದ್ದಾಳೆ ಅನ್ನುವುದು ನನಗೆ ಗೊತ್ತಿಲ್ಲ, ಪ್ರತಿವಾದಿಯು ದಾವಾ ಆಸ್ತಿ ನನ್ನದು ಅದು ನಾನು ವಹಿವಾಟು ಮಾಡುತ್ತ ಬಂದಿದ್ದೇನೆ ಅಂತಾ ದಾಖಲೆಯನ್ನು ಕೊಟ್ಟಿದ್ದಾಳೆ ಅವು ಯಾವ ದಾಖಲೆಗಳು ಅಂತಾ ನನಗೆ ನಿಖರವಾಗಿ ಹೇಳಲು ಬರುವುದಿಲ್ಲ. ನಾನು ಪ್ರತಿವಾದಿ ಹಾಜರುಪಡಿಸಿದ ದಾಖಲೆಗಳನ್ನು ನೋಡಿದ್ದೇನೆ. ಸಾಮಾನ್ಯವಾಗಿ ಸರಕಾರದಿಂದ ಮನೆ ಮಂಜೂರು ಆದರೆ ಯಾರ ಹೆಸರಿಗೆ ದಾಖಲಿರುತ್ತದೆ ಅವರಿಗೆ ಮನೆ ಮಂಜೂರು ಆಗುತ್ತದೆ ಎಂದರೆ ಸರಿ. ನಿಪಿ 18 ಮತ್ತು 19 ದಾಖಲೆಗಳನ್ನು ಸಾಕ್ಷಿಗೆ ತೋರಿಸಿ ಅದರಲ್ಲಿ ಕಾಣುವ ಪ್ರತಿವಾದಿ ವಾಸವಾಗಿರುವ ಮನೆ ಎಂದರೆ ಸಾಕ್ಷಿಯು ದಾಖಲೆಯನ್ನು ನೋಡಿ ಹೌದು ಎನ್ನುತ್ತಾರೆ, ಸದರಿ ನಿಪಿ 18 ಮತ್ತು 19 ರಲ್ಲಿ ಕಾಣುವ ಮನೆಯ ಖಾತಾ ನಂ ನನಗೆ ಹೇಳಲು ಬರುವುದಿಲ್ಲ. ಸದರಿ ಬಾವಚಿತ್ರದಲ್ಲಿ ಕಾಣುವ ಮನೆಯ ಖಾತಾ ನಂ ಏನು ಮತ್ತು ಅದಕ್ಕೆ ಸಂಬಂದಿಸಿದಂತೆ ಯಾವ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದೀಯ ಅಂತಾ ತಿಳಿದುಕೊಳ್ಳಲು ನಾನು ಪ್ರಯತ್ನಿಸಿಲ್ಲ. ಮರಿಯಮ್ಮ ವಾಸವಾಗಿರುವ ಮನೆಯ ಚೆಕ್ ಬಂದಿ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ಯಾರ ಆಸ್ತಿ ಇದೆ ಅಂತಾ ನನಗೆ ನೆನಪಿಲ್ಲ, ಉತ್ತರಕ್ಕೆ ಮತ್ತು ದಕ್ಷಿಣಕ್ಕೆ ಯಾರ ಆಸ್ತಿ ಇದೆ ಅಂತಾ ನನಗೆ ಗೊತ್ತಿಲ್ಲ. ದಾವಾ ಆಸ್ತಿಗೂ ನನ್ನ ಮನೆಗೂ ಸುಮಾರು 2 ವರೆ ಇಂದ 3 ಸಾವಿರ ಅಡಿ ಅಂತರವಿದೆ. ಪ್ರತಿವಾದಿ ವಾಸ ವಾಗಿರುವ ಮನೆಗೂ ಮತ್ತು ನನ್ನ ಮನೆಗೂ ಅಷ್ಟೆ ಅಂತರವಿದೆ. ದಾವಾ ಆಸ್ತಿ ಮತ್ತು ಪ್ರತಿವಾದಿಯ ಆಸ್ತಿಯ ನಡುವೆ ಚರಂಡಿ ಇದೆ ಎಂದರೆ ಸರಿ. ನಾನು ಚಿಕ್ಕವನಿದ್ದಾಗ ಚಾರೆಮ್ಮ ಇವಳನ್ನು ನೋಡಿರುತ್ತೇನೆ. ಆಸ್ತಿ ನಂ 1 ಚಾರೆಮ್ಮನ ಹೆಸರಿನಲ್ಲಿದೆ ಎಂದರೆ ಸರಿಯಲ್ಲ ಸಾಕ್ಷಿಯು

ಮುಂದುವರೆದು ಅದು ಅವರ ಮಗಳ ಹೆಸರಿನಲ್ಲಿದೆ ಎನ್ನುತ್ತಾರೆ. ಸದರಿ ಖಾತಾ ನಂ 1 ಈಗಲೂ ಸಹ ಚಾರೆಮ್ಮನ ಹೆಸರಿನಲ್ಲಿದೆ ಎಂದರೆ ಸರಿ ಸಾಕ್ಷಿಯು ಮುಂದುವರೆದು ಅವರ ಮಗಳು ಖಾತೆಯನ್ನು ಬದಲಾವಣೆ ಮಾಡಿಸಿಕೊಂಡಿಲ್ಲ ಎನ್ನುತ್ತಾರೆ. ದಿನಾಂಕ 05.02.2016 ರಂದು ಗ್ರಾಮ ಪಂಚಾಯಿತಿ ಅವರು ಮರಿಯಮ್ಮ ಇವರಿಗೆ ಒಂದು ನೋಟೀಸು ನೀಡಿದ್ದಾರೆ ಎಂದರೆ ಸರಿ. ನಿಪಿ 18-19 ರಲ್ಲಿ ಕಾಣುವ ಮನೆ ಪ್ರತಿವಾದಿಯು ವಾಸವಾಗಿದ್ದು ಅದಕ್ಕೆ ಸಂಬಂದಿಸಿದ ದಾಖಲೆಯು ನಿಡಿ 2 ಆಗಿರುತ್ತದೆ ಎಂದರೆ ಸರಿಯಲ್ಲ. ಚಾರವ್ವ ಇವರಿಗೆ ಮರಿಯಮ್ಮ ಮತ್ತು ನೀಲಮ್ಮ 2 ಜನ ಮಕ್ಕಳು. ಮರಿಯಮ್ಮ ಇವರಿಗೆ ಕೊಟ್ರೇಶ, ನಿಂಗಮ್ಮ ಹಾಗೂ ಇನ್ನೊಬ್ಬ ಮಗ ಇದ್ದ ಅವನು ಮರಣ ಹೊಂದಿದ್ದಾನೆ. ನೀಲಮ್ಮ ಇವರಿಗೆ 4 ಜನ ಮಕ್ಕಳು ಅವರೆಂದರೆ ಪ್ರಕಾಶ, ಭಾರತಿ, ಮಲ್ಲಿಕಾರ್ಜುನ ಮತ್ತು ಮಂಜುನಾಥ. ನಮ್ಮ ಗ್ರಾಮದಲ್ಲಿ ಮೇಲೆ ಹೇಳಿದ ಕುಟುಂಬ ಮಾತ್ರ ಹರಿಜನ ಕುಟುಂಬ ಆಗಿರುತ್ತದೆ. ಸರಕಾರದಿಂದ ಯಾವುದೇ ಮೀಸಲಾತಿ ಸೌಲಭ್ಯಗಳು ಬಂದಲ್ಲಿ ವಾದಿ ಪ್ರತಿವಾದಿಯರ ಕುಟುಂಬಕ್ಕೆ ಮಾತ್ರ ಬರುತ್ತದೆ ಎಂದರೆ ಸರಿಯಲ್ಲ. ನಿಲಮ್ಮ ಎನ್ನುವವರು ಸನ 2012-13 ರಿಂದ 2018 ರವರೆಗೆ ಕಡಲುಬಾಳು ಗ್ರಾಮ ಪಂಚಾಯಿತಿಯ ಸದಸ್ಯರಾಗಿದ್ದರು ಎಂದರೆ ಸರಿ. ಮರಿಯಮ್ಮ ಇವರ ಕುಟುಂಬಕ್ಕೆ 2 ಚಿಕ್ಕ ಮನೆಗಳು ಇವೆ. ನೀಲಮ್ಮ ಅನ್ನುವವರ ಕುಟುಂಬಕ್ಕೆ 1 ಮನೆ ಇದೆ. ಮರಿಯಮ್ಮ ಹಾಗೂ ಅವರ ಮಕ್ಕಳಿಗೆ ವಾಸ ಮಾಡಲು ಎಲ್ಲರಿಗೂ ಮನೆಗಳು ಇವೆ ಎಂದರೆ ಸಾಕ್ಷಿಯು ಇಬ್ಬರಿಗೆ ಮಾತ್ರ ಇವೆ ಎನ್ನುತ್ತಾರೆ. ನನ್ನ ಸಾಕ್ಷಿ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿ ಕೊಟ್ಟಿದ್ದೇನೆ. ಪ್ರತಿವಾದಿಯು ದಾವಾ ಆಸ್ತಿಯಲ್ಲಿ ಪಾಯ ಹಾಕುವ ಸಮಯದಲ್ಲಿ ಅಧಿಕಾರಿಗಳು ಬಂದಿದ್ದರೂ ಅವರು ಯಾರು ಹೆಸರು ಪದನಾಮ ನನಗೆ ಗೊತ್ತಿಲ್ಲ, ಅವರು ಯಾವ ದಿನಾಂಕದಂದು ಬಂದಿದ್ದರು ಎಂದು ನನಗೆ ಹೇಳಲು ಬರುವುದಿಲ್ಲ. ದಾವಾ ಆಸ್ತಿಗೆ ಯಾವುದೇ ಅದಿಕಾರಿಗಳು ಬಂದಿಲ್ಲ, ಸ್ಥಳ ಪರೀಕ್ಷೆ ಮಾಡಿಲ್ಲ, ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಖಾತಾ ನಂ 1 ರ ಚೆಕ್ ಬಂದಿಯನ್ನು ನಾನು ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಹೇಳಿ ಬರೆಸಿದ್ದೇನೆ. ನಾನು ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಖಾತಾ ನಂ 1 ಮತ್ತು ಅದರ ಚೆಕ್ ಬಂದಿಯನ್ನು ಹೇಳಿ ಬರೆಸಿಲ್ಲ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಗ್ರಾಮ ಪಂಚಾಯಿತಿಯವರು ದಿನಾಂಕ 03.12.2013 ರಂದು ಠರಾವಿನ ಮೂಲಕ ವಾದಿಗೆ ನೀಡಿರುತ್ತಾರೆ ಎಂದರೆ ಸುಳ್ಳು. ಕೊಟ್ರಗೌಡ, ಮಂಜುನಾಥಗೌಡ, ಶಂಕ್ರಪ್ಪ, ಶಿವಾನಂದ, ಮಾರುತಿ, ಬರಲಿಂಗನಗೌಡ, ಈಶ್ವರ ಗೌಡ, ಬಸಪ್ಪ, ಚೆನ್ನಪ್ಪ ಇವರೆಲ್ಲರೂ ನಮ್ಮ ಊರಿನವರು ಎಂದರೆ ಸರಿ. ಸುಮಾರು 20 ಜನ ಸಹಿ ಮಾಡಿ ಗ್ರಾಮ ಪಂಚಾಯಿತಿಗೆ ಕೊಟ್ಟ ಮನವಿ ಪತ್ರ ದಂತೆ ದಾವಾ ಆಸ್ತಿಯನ್ನು ವಾದಿಗೆ ನೀಡಿರುತ್ತಾರೆ ಎಂದರೆ ಸುಳ್ಳು. ಅಲ್ಲಿಂದ ಇಲ್ಲಿಯವರೆಗೂ ವಾದಿಯು ದಾವಾ ಆಸ್ತಿಗೆ ಸಂಬಂದಿಸಿದಂತೆ ತೆರಿಗೆಯನ್ನು ಪಾವತಿಸುತ್ತಾ ಬಂದಿರುತ್ತಾಳೆ ಆ ಬಗ್ಗೆ

ನ್ಯಾಯಾಲಯಕ್ಕೆ ದಾಖಲೆಯನ್ನು ಹಾಜರುಪಡಿಸಿದ್ದಾಳೆ ಎಂದರೆ ಸುಳ್ಳು, ಈ ಎಲ್ಲಾ ವಿಚಾರ ನನಗೆ ಗೊತ್ತಿದ್ದರೂ ಸಹ ಪ್ರತಿವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಗ್ರಾಮದಲ್ಲಿ ಯಾರೇ ಮರಣ ಹೊಂದಿದರೂ ಪ್ರತಿವಾದಿಯು ಬಂದು ಅವರ ಅಂತ್ಯ ಸಂಸ್ಕಾರಕ್ಕೆ ಜಾಗವನ್ನು ತೋರಿಸಿ ಪೂಜೆ ಮಾಡುತ್ತಾಳೆ ಎಂದರೆ ಸರಿ. ಆ ಕಾರಣದಿಂದಾಗಿ ನನಗೂ ಪ್ರತಿವಾದಿಗೂ ಒಳ್ಳೆಯ ವಿಶ್ವಾಸ ವಿದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ವಾದಿಯೊಂದಿಗೂ ಸಹ ನನಗೆ ಒಳ್ಳೆ ವಿಶ್ವಾಸ ಇದೆ ಅವರೂ ಸಹ ಪೂಜೆ ಮಾಡುತ್ತಾಳೆ ಎನ್ನುತ್ತಾರೆ. ಮರಿಯಮ್ಮ ಇವರಿಗೆ ಆಸ್ತಿ ನಂ 1 ರಲ್ಲಿ ಮನೆ ಮಂಜೂರು ಆಗಿದೆ ಆ ಬಗ್ಗೆ ನಾನು ತೆರಿಗೆ ಪಾವತಿ ದಾಖಲೆ ಹಾಗೂ ನಮೂನೆಗಳನ್ನು ನೋಡಿರುತ್ತೇನೆ. ನಿಡಿ 10 ಮನೆ ಮಂಜೂರಾತಿ ಆದೇಶ ಪತ್ರದಲ್ಲಿ ಯಾವದೇ ಆಸ್ತಿ ನಂ ನಮೂದು ಇಲ್ಲ ಎಂದರೆ ಸರಿ. ಸಾಮಾನ್ಯವಾಗಿ ಯಾವುದೇ ಒಂದು ಮನೆಗೆ ಸಂಬಂದಿಸಿದಂತೆ ಪರವಾನಗಿ ಕೊಟ್ಟಾಗ ಅದರಲ್ಲಿ ಆಸ್ತಿ ನಂ ನಮೂದಿಸುತ್ತಾರೆ ಎಂದರೆ ಸರಿ. ಮರಿಯಮ್ಮ ಇವಳ ತಂಗಿ ಪಂಚಾಯಿತಿ ಸದಸ್ಯಳಾಗಿದ್ದರಿಂದ ವಾದಿಗೆ ತೊಂದರೆ ಕೊಡಬೇಕು ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿರುತ್ತಾಳೆ ಎಂದರೆ ಸರಿಯಲ್ಲ. ನಮ್ಮ ಗ್ರಾಮ ಹಸ್ತಾಂತರಗೊಂಡ ಗ್ರಾಮ ಎಂದರೆ ಸರಿ. ಸಾಮಾನ್ಯವಾಗಿ ಯಾವುದೇ ಒಂದು ಆಸ್ತಿಯನ್ನು ಕೊಡಬೇಕಾದರೆ ಪಂಚಾಯಿತಿಯವರು ಬಂದು ಆಸ್ತಿಯನ್ನು ಅವರಿಗೆ ಕೊಡುತ್ತಾರೆ ಎಂದರೆ ಇರಬಹುದು, ಸಾಕ್ಷಿಯು ಈ ಹಿಂದೆ ಗ್ರಾಮ ಶಿಫ್ಷ ಆಗಿದ್ದರಿಂದ ಆಸ್ತಿ ನಂ 1 ಅನ್ನು ಪ್ರತಿವಾದಿಗೆ ಕೊಟ್ಟಿದ್ದಾರೆ ಎನ್ನುತ್ತಾರೆ, ಹುಲಿಗೆಮ್ಮ ಸನ್ 2005-06 ರಿಂದ ನಮ್ಮ ಗ್ರಾಮದಲ್ಲಿ ವಾಸವಾಗಿರುತ್ತಾಳೆ ಎಂದರೆ ಸರಿ. ದಾವಾ ಆಸ್ತಿಯನ್ನು ಪಂಚಾಯಿತಿಯವರು ವಾದಿಗೆ ನೀಡಿರುತ್ತಾರೆ ಎಂದರೆ ಸುಳ್ಳು. ಹುಲಿಗೆಮ್ಮ ಇವರಿಗೆ ಆಸ್ತಿಯನ್ನು ಕೊಡುವ ಸಮಯದಲ್ಲಿ ಪ್ರತಿವಾದಿಯು ತಕರಾರು ಮಾಡಿರುತ್ತಾಳೆ. ಹೇಗಾದರೂ ಮಾಡಿ ದಾವಾ ಆಸ್ತಿಯನ್ನು ಕಬಳಿಸಬೇಕು ಅನ್ನುವ ಉದ್ದೇಶದಿಂದ ಪ್ರತಿವಾದಿಯು ತನ್ನ ಮನೆಯ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ ಸುಳ್ಳು ತಕರಾರು ಸಲ್ಲಿಸಿರುತ್ತಾಳೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಮೊದಲಿಂದಲೂ ವಾದಿ ವಾಾಸವಾಗಿದ್ದು ಅದರಲ್ಲಿ ಮನೆಕಟ್ಟುವ ಸಮಯದಲ್ಲಿ ಪ್ರತಿವಾದಿ ಬಂದು ತಕರಾರು ಮಾಡಿರುತ್ತಾಳೆ ಎಂದರೆ ಸುಳ್ಳು, ದಾವಾ ಆಸ್ತಿಗೂ ಮತ್ತು ಪ್ರತಿವಾದಿಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ಮರಿಯಮ್ಮ ಇವರು ನನ್ನ ಮನೆಯ ಕೆಲಸ ಇದ್ದಲ್ಲಿ ಮಾಡಿಕೊಟ್ಟು ಹೋಗುತ್ತಾಳೆ ಆದ್ದರಿಂದ ಅವಳಿಗೂ ನನಗೂ ವಿಶ್ವಾಸ ಇದೆ ಎಂದರೆ ಸರಿ. ದಾವಾ ಆಸ್ತಿಯಲ್ಲಿ ಪ್ರತಿವಾದಿಯು ಯಾವತ್ತು ವಾಸವಿಲ್ಲ ಅದರಲ್ಲಿ ಅವಳಿಗೆ ಯಾವುದೇ ಹಕ್ಕು, ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯು ನನಗೆ ಸಾಕ್ಷಿ ನುಡಿಯಲು ಕರೆದಿರುತ್ತಾಳೆ ಎಂದರೆ ಸರಿ. ಪ್ರತಿವಾದಿಗೂ ನನಗೂ ಒಳ್ಳೆಯ ಬಾಂದವ್ಯ

ಇರುವುದರಿಂದ ಸುಳ್ಳು ಸಾಕ್ಷ್ಯ ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ